ಈ ಸರ್ಕಾರಕ್ಕೆ ಕ್ರಮಬದ್ಧವಾಗಿ, ನಡೆಸುವಂಥಾದ್ದು ಕೂಡ ಇಲ್ಲ. ಅದಕ್ಕೆ ನಾವು ಸರಿಯಾದ ಪ್ರಕಟಣೆಯನ್ನು ಕೊಟ್ಟು, ರಾಜ್ಯದ ಜನತೆಗೆ ಇವತ್ತು ಹೇಳುವಂಥ ವಿಚಾರಗಳು, ಗಂಗಾವತಿಯಲ್ಲಿ ಏನೇನು ಹೇಳಿದ್ದೀರಿ, ರಾಯಚೂರಿನಲ್ಲಿ ಹೇಳಿದ್ದೀರಿ, ದಾವಣಗೆರೆಯಲ್ಲಿ ಹೇಳಿದ್ದೀರಿ. ನಾವು ಕೂಡ ಬರುತ್ತೇವೆ. ಮಾನ್ಯ ಬಿ.ಎಸ್.ಯಡಿಯೂರಪ್ಪನವರೆ, ಇನ್ನು ಕರ್ನಾಟಕ ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷ ಶಕ್ತಿಯುತವಾಗಿದೆ. ನಿಮ್ಮನ್ನು ಎದುರಿಸುತ್ತೇವೆಂದು ಹೇಳಿ, ನಾವು ಸಭಾತ್ಯಾಗ ಮಾಡುತ್ತೇವೆ.

(ಈ ಹಂತದಲ್ಲಿ ಕಾಂಗ್ರೆಸ್ ಪಕ್ಷದ ಸದಸ್ಯರು ಸಭಾತ್ಯಾಗ ಮಾಡಿದರು)

ಶ್ರೀ ಎಂ.ಪಿ. ರೇಣುಕಾಚಾರ್ಯ :– ಸನ್ಮಾನ್ಯ ಅಧ್ಯಕ್ಷರೆ, ಹಕ್ಕುಚ್ಯುತಿಯಾಗಿಲ್ಲ.

ಒಬ್ಬ ಮಾನ್ಯ ಸದಸ್ಯರು :– ರಾಜ್ಯದಲ್ಲಿ ಕಾಂಗ್ರೆಸ್ ದಿವಾಳಿ.....

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ :– ಮಾನ್ಯ ಅಧ್ಯಕ್ಷರೆ, ತಾವು ತೀರ್ಮ ಈಗ ಕೊಡುತ್ತೀರಾ, ಅಥವಾ ಆಮೇಲೆ ಕೊಡುತ್ತೀರಾ?

ಶ್ರೀ ಜೆ.ಸಿ. ಮಾಧುಸ್ವಾಮಿ :– ಮಾನ್ಯ ಅಧ್ಯಕ್ಷರೆ, ತಮ್ಮ ರೂಲಿಂಗ್ ಏನು ಎಂದು ಹೇಳಿ.

ಅಧ್ಯಕ್ಷರು :– ನನ್ನ ರೂಲಿಂಗ್ ಅನ್ನು ಕಾದಿರಿಸಿದ್ದೇನೆ. ಎಲ್ಲರ ವಾದವನ್ನು ಕೇಳಿದ್ದೇನೆ, ರೂಲಿಂಗ್ ಅನ್ನು ಕಾದಿರಿಸಿದ್ದೇನೆ.

4. <u>ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು</u> :–

ಅ) ವಿಷಯ :– <u>ರಾಷ್ಟ್ರಧ್ವಜಕ್ಕೆ ಮತ್ತು ರಾಷ್ಟ್ರಗೀತೆಗೆ ಅವಮಾನವಾಗುವಂಥಾ ರೀತಿ ನಡೆದ ಘಟನೆ</u> :

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) :– ಮಾನ್ಯ ಅಧ್ಯಕ್ಷರೆ, ನಿನ್ನೆ ನಾನು ಮಾನ್ಯ ನಾರಾಯಣಮೂರ್ತಿಯವರ ಬಗ್ಗೆ ಕೇಳಿದಾಗ, ಮಾನ್ಯ ಗೃಹ ಸಚಿವರು, ಈ ಸದನಕ್ಕೆ ಒಂದು ವರದಿಯನ್ನು ಕೊಡುತ್ತೇವೆಂದು ನಿನ್ನೆ ಸದನದಲ್ಲಿ ಹೇಳಿದ್ದರು. ತಾವು ತಮ್ಮ ಪೀಠದಲ್ಲಿದ್ದಾಗ, ನಾರಾಯಣಮೂರ್ತಿಯವರು

ರಾಷ್ಟ್ರಗೀತೆಗೆ ಮಾಡಿರುವಂಥ ಅಪಮಾನ, ಅಗೌರವದ ಬಗ್ಗೆ, ನಾವು ಇಲ್ಲಿ ಚರ್ಚೆಯನ್ನು ಮಾಡಿ, ಸರ್ಕಾರದ ಗಮನವನ್ನು ಸೆಳೆದದ್ದು ಆಯಿತು. ಇವತ್ತು ಸರ್ಕಾರ ಆ ಬಗ್ಗೆ ಸಮಗ್ರವಾಗಿ ವರದಿಯನ್ನು ಈ ಸದನದ ಮುಂದೆ ಮಂಡಿಸುತ್ತೇವೆಂದು ಹೇಳಿದರು. ಅದನ್ನು ನಾನು ತಮ್ಮ ಮುಖಾಂತರ ಕೇಳುತ್ತಿದ್ದೇನೆ. ಇವತ್ತು ಮಾನ್ಯ ನಾರಾಯಣಮೂರ್ತಿಯವರು ಕ್ಷಮಾಪಣೆಯನ್ನು ಕೇಳಿದ್ದಾರೆ. ಇವರು ಕ್ಷಮಾಪಣೆಯನ್ನು ಕೇಳಿದ ಮೇಲೆ,. ಇವರು ತಪ್ಪು ಮಾಡಿದ್ದಾರೆಂಬ ಅರ್ಥ ಅದು. ಇದು ಕ್ಷಮಾಪಣೆಯಲ್ಲ, ರಾಷ್ಟ್ರಗೀತೆಗೆ ಅಗೌರವ ಮಾಡಿ, ಆಮೇಲೆ ಕ್ಷಮಾಪಣೆ ಕೇಳಿದರೆ, ಅದು ಒಪ್ಪತಕ್ಕಂಥಾದ್ದು ಅಲ್ಲ. ಆದ್ದರಿಂದ ರಾಷ್ಟ್ರಕ್ಕೆ ಅಗೌರವವಾಗಿದೆ. ಅದರ ಬಗ್ಗೆ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರ ನಾರಾಯಣಮೂರ್ತಿಯವರ ಬಗ್ಗೆ ಈಗ ಏನು ಕ್ರಮ ಕೈಗೊಂಡಿದೆಯೆಂಬ ವಿಷಯವನ್ನು ಸರ್ಕಾರ ಹೇಳಬೇಕು. ಅವರು ಕ್ಷಮಾಪಣೆ ಮಾಡಿದ್ದಾರೆಂದು ಹೇಳಿರತಕ್ಕಂಥಾದ್ದು, ಸಾಧ್ಯವೇ ಇಲ್ಲ. ಅದನ್ನು ಸ್ಪಷ್ಟಪಡಿಸಬೇಕು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :- ಮಾನ್ಯ ಅಧ್ಯಕ್ಷರೆ, ನಿನ್ನೆ ಇಲ್ಲಿ ನಡೆದಂಥ ಚರ್ಚೆ ಬಗ್ಗೆ ಉತ್ತರವನ್ನು ಮಾನ್ಯ ಗೃಹ ಮಂತ್ರಿಯವರು ಕೊಡುತ್ತೇನೆಂದು ಹೇಳಿದ್ದಾರೆ. ಅವರು ಉತ್ತರವನ್ನು ಕೊಡಲಿ, ಆದರೆ ಅವರು ಕ್ಷಮಾಪಣೆಯನ್ನು ಕೇಳಿರುವಂಥಾದ್ದನ್ನು ಒಪ್ಪುವುದಕ್ಕೆ ಆಗುವುದಿಲ್ಲ, ಅವರು ರಾಷ್ಟ್ರಗೀತೆಗಲ್ಲ, ರಾಷ್ಟ್ರಕ್ಕೇ ಅವಮಾನ ಮಾಡಿದ್ದಾರೆ. ಆ ಮನುಷ್ಯ ಈ ರಾಷ್ಟ್ರವನ್ನು denigrate ಮಾಡಿದ್ದಾರೆ, ಹಾಗಾಗಿ ಅವರ ವರದಿಯನ್ನು ತರಿಸಿಕೊಂಡು ಹೇಳುತ್ತೇವೆಂದು ಮಾನ್ಯ ಗೃಹಮಂತ್ರಿಯವರು ನಿನ್ನೆ ಸದನದಲ್ಲಿ ಹೇಳಿದ್ದಾರೆ. ಅವರು ಏನು ವರದಿಯನ್ನು ತರಿಸಿದ್ದಾರೆ. ಅದನ್ನು ತಕ್ಷಣ ಸದನಕ್ಕೆ ಕೊಡಬೇಕು. ಮಾನ್ಯ ಗೃಹ ಮಂತ್ರಿಯವರು ಉತ್ತರವನ್ನು ಕೊಡಬೇಕೆಂದು ನಾನು ತಮ್ಮ ಮುಖಾಂತರ ಕೇಳಿಕೊಳ್ಳುತ್ತೇನೆ.

ಶ್ರೀ ಹೆಚ್.ಡಿ. ಬಸವರಾಜು :- ಮಾನ್ಯ ಅಧ್ಯಕ್ಷರೆ, ಈಗ ಇನ್ನೊಂದು ವಿಚಾರ, ಕ್ಷಮಾಪಣೆಯು ಈ ಸದನದಲ್ಲಿ ಗೌರವಾನ್ವಿತ ಸದಸ್ಯರು ಆಕ್ಷೇಪಣೆ ಮಾಡಿದ ಮೇಲೆ ಬಂದಿರುವಂಥಾದ್ದು. ಆದುದರಿಂದ ಆ ಕ್ಷಮಾಪಣೆಯ ವಿಚಾರದಲ್ಲಿ, ನಾವು ಅವರು ಕೊಟ್ಟಿದ್ದಾರೆಂದು ವಿಚಾರವನ್ನು ಇಲ್ಲಿ ಗಂಭೀರವಾಗಿ ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ, ಏಕೆಂದರೆ ಎಲ್ಲಾ ಕಡೆ ಪ್ರತಿಭಟನೆ ಜಾಸ್ತಿಯಾಗುತ್ತದೆ. ಆದ್ದರಿಂದ ವೈಯಕ್ತಿಕವಾಗಿ ಧಕ್ಕೆಯಾಗುತ್ತದೆಂದು ಅವರು ಕ್ಷಮಾಪಣೆಯನ್ನು ಕೇಳಿದ್ದಾರೆಯೇ ವಿನಃ, ಅವರು ತಾನು ಅಗೌರವವನ್ನು ಸೂಚಿಸಿದ್ದೇನೆ. ಈ ಅಗೌರವವನ್ನು ನಾನು

ಮಾಡಬಾರದಿತ್ತು, ಎನ್ನುವಂಥಾ ಹೇಳಿಕೆ ಅವರ ಅವರ ಮನಸ್ಸಿನಲ್ಲಿ ತಕ್ಷಣ ಬಂದಿಲ್ಲ. ಎಲ್ಲಾ ಕಡೆ ಪ್ರತಿಭಟನೆ ಮತ್ತು ಸದನದಲ್ಲಿ ಪ್ರತಿಧ್ವನಿ ಬಂದ ನಂತರ ಇದು ಬಂದಿರುವುದು.

ಅಧ್ಯಕ್ಷರು :– ಆಯಿತು, ಅದರ ಬಗ್ಗೆ ಚರ್ಚೆಯಾಗಿದೆ. ಮಾನ್ಯ ಗೃಹ ಸಚಿವರು ಉತ್ತರವನ್ನು ಹೇಳುತ್ತಾರೆ.

(ಗೊಂದಲ)

ಶ್ರೀ ಹೆಚ್.ಡಿ. ಬಸವರಾಜು :– ಮಾನ್ಯ ಅಧ್ಯಕ್ಷರೆ, ಅವರ ಮೇಲೆ ಕಾನೂನು ಕ್ರಮ ಏನು ಆಗಬೇಕೋ ಅದು ಆಗಲೇ ಬೇಕು. ಇವತ್ತು ರಾಷ್ಟ್ರಕ್ಕೆ, ನಮ್ಮ ದೇಶಕ್ಕೆ ಅಗೌರವ ತೋರಿಸಿರುವಂಥ ವಿಚಾರದಲ್ಲಿ ಕಾನೂನು ಕ್ರಮ ಏನು ಇದೆಯೋ ಅದನ್ನು ತೆಗೆದುಕೊಳ್ಳುವಂಥಾದ್ದು ಆಗಬೇಕೆಂದು ನಾನು ಆಗ್ರಹಪಡಿಸುತ್ತೇನೆ.

ಅಧ್ಯಕ್ಷರು :– ತಾವೆಲ್ಲಾ ಹೇಳಿದ್ದೀರಿ. ಈಗ ಅದರ ಬಗ್ಗೆ ಮಾನ್ಯ ಗೃಹ ಸಚಿವರು ಉತ್ತರವನ್ನು ಕೊಡುತ್ತಾರೆ. ನಿಮ್ಮ ಅಭಿಪ್ರಾಯ ಅಗತ್ಯ ಇಲ್ಲ. ಮಾನ್ಯ ಗೃಹ ಸಚಿವರು ಉತ್ತರ ಕೊಡುತ್ತಾರೆ.

ಶ್ರೀ ಎಂ.ಪಿ. ವೆಂಕಟೇಶ್ :– ಮಾನ್ಯ ಅಧ್ಯಕ್ಷರೆ, ಮಾನ್ಯ ನಾರಾಯಣಮೂರ್ತಿಯವರು ತಪ್ಪು ಎಂದು ಒಪ್ಪಿಕೊಂಡಿದ್ದಾರೆ. ಅವರಿಗೆ ಸರ್ಕಾರ ಯಾವುದೇ ರೀತಿಯ ಸಹಕಾರವನ್ನು ಕೊಡಬಾರದು. ಯಾವುದೇ ಜಮೀನನ್ನು ಕೊಡಬಾರದು, ಅವರು ಈಗ ಏನು ತಪ್ಪು ಮಾಡಿದ್ದಾರೆಂದು ಒಪ್ಪಿಕೊಂಡಿದ್ದಾರೆ. ಸರ್ಕಾರ ಇನ್ನು ಮುಂದೆ ಆ ಸಂಸ್ಥೆಯವರಿಗೆ ಯಾವುದೇ ರೀತಿಯ ಸಹಕಾರವನ್ನು ಕೊಡಬಾರದು. ಅವರಿಗೆ ಸಹಕಾರವನ್ನು ಕೊಟ್ಟರೆ ರಾಜ್ಯಕ್ಕೆ ಅನ್ಯಾಯವಾಗುತ್ತದೆ. ಮೈಸೂರಿನಲ್ಲಿ ಸಾವಿರಾರು ಎಕರೆ ಕೇಳುತ್ತಿದ್ದಾರೆ.

ಅಧ್ಯಕ್ಷರು :– ಆಯಿತು ಕುಳಿತುಕೊಳ್ಳಿ.

ಶ್ರೀ ಎಂ.ಪಿ. ಪ್ರಕಾಶ್ (ಗೃಹ ಸಚಿವರು) :– ಮಾನ್ಯ ಅಧ್ಯಕ್ಷರೆ, ಈ ವಿಚಾರದಲ್ಲಿ ನಾನು ನಿನ್ನೆ ದಿವಸ ಪೊಲೀಸ್ ಅಧಿಕಾರಿಗಳ ಜೊತೆಯಲ್ಲಿ ಚರ್ಚೆ ಮಾಡಿದ್ದೇನೆ. ಅದರ ಇಡೀ ವರದಿಯನ್ನು ತಯಾರು ಮಾಡಿ, ಅವರು ವರದಿಯನ್ನು ಕಳುಹಿಸಿಕೊಡುತ್ತೇವೆಂಬ ಮಾತನ್ನು ಹೇಳಿದ್ದಾರೆ. ಈ ದಿವಸ ಸೈನ್ಯದ ಮತ್ತು ಪೊಲೀಸ್ ಇಲಾಖೆಯ ಮತ್ತು ಸರ್ಕಾರದೊಂದಿಗೆ ಲೈಜಾನ conference ಎನ್ನುವಂಥಾದ್ದು, Southern India Area Commander ಕರೆದಿರುವಂತಹ

ಸಭೆಯಲ್ಲಿ ನಮ್ಮ ಎಲ್ಲಾ ಅಧಿಕಾರಿಗಳು, ಮುಖ್ಯ ಕಾರ್ಯದರ್ಶಿಗಳಾದಿಯಾಗಿ, ನಾವೆಲ್ಲರೂ ಅಲ್ಲಿ ಭಾಗವಹಿಸಿದ್ದೆವು. ಅಲ್ಲಿ ಚರ್ಚೆ 1.00–1.30 ಗಂಟೆಗೆ ಮುಗಿಯಬಹುದು. ಆ ವರದಿ ಬಂದ ತಕ್ಷಣ ಸಂಪೂರ್ಣವಾಗಿ ನೋಡಿ, ಸಾಧ್ಯವಾದರೆ ಈ ದಿವಸ ಸಾಯಂಕಾಲ ಅಥವಾ ನಾಳೆ ದಿವಸ ಖಂಡಿತವಾಗಿ ಈ ಸದನಕ್ಕೆ ಏನು ಕ್ರಮವನ್ನು ಕೈಗೊಳ್ಳುತ್ತೇವೆನ್ನುವುದನ್ನು ತಿಳಿಸುತ್ತೇನೆ.

ಆ) ವಿಷಯ :– ಕಬ್ಬು ಬೆಳೆಗಾರರು ವಿಷ ಸೇವಿಸಿರುವುದರ ಮತ್ತು ಕಬ್ಬು ಸಮಸ್ಯೆಯ ಬಗ್ಗೆ.

ಶ್ರೀ ಬಿ.ಆರ್. ಪಾಟೀಲ್ (ಆಳಂದ್) :– ಮಾನ್ಯ ಅಧ್ಯಕ್ಷರೆ, ಜೇವರ್ಗಿಯಲ್ಲಿ 8 ಜನ ಕಬ್ಬು ಬೆಳೆಗಾರರು ವಿಷವನ್ನು ತೆಗೆದುಕೊಂಡು, ಆಸ್ಪತ್ರೆಯಲ್ಲಿ ದಾಖಲಾಗಿದ್ದಾರೆ.

ಅಧ್ಯಕ್ಷರು :– ನಿಮಗೆ ಯಾರು ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟದ್ದು, ಕುಳಿತುಕೊಳ್ಳಿ, ಆಮೇಲೆ ನಿಮಗೆ ಅವಕಾಶ ಕೊಡುತ್ತೇನೆ. ಈಗ ಏನೆಂದರೆ, ನೀವು ನೀವೇ ನಿಂತುಕೊಂಡು ಏನು ವಿಚಾರವನ್ನಾದರೂ ಪ್ರಸ್ತಾಪ ಮಾಡಬಹುದಾ? ನೀವು ವಿಷಯವನ್ನು ನಮ್ಮ ಗಮನಕ್ಕೆ ತರಬಾರದ? ನಿಮಗೆ ಅರ್ಥವಾಗುವುದಿಲ್ಲ.

(ಗೊಂದಲ)

ಡಾ॥ ಹೆಚ್.ಸಿ. ಮಹದೇವಪ್ಪ :– ಮಾನ್ಯ ಅಧ್ಯಕ್ಷರೆ, 8 ಜನ ರೈತರು ವಿಷ ತೆಗೆದುಕೊಂಡಿದ್ದಾರೆ.

ಅಧ್ಯಕ್ಷರು :– ನೀವು ವಿಷಯ ಏನೆಂಬುದನ್ನು ನಮ್ಮ ಗಮನಕ್ಕೆ ತರಬೇಕು. ಅದಕ್ಕೆ ಯಾವ ಸಮಯದಲ್ಲಿ ಅವಕಾಶವನ್ನು ಕೊಡಬೇಕೋ ಕೊಡುತ್ತೇನೆ. ಈ ರೀತಿ ಸುಮ್ಮನೆ ನಿಂತುಕೊಂಡು ಎಲ್ಲೋ ಏನೇನೋ ವಿಷಯವನ್ನು ಪ್ರಸ್ತಾಪ ಮಾಡಿದರೆ, ನಾನು ಏನು ಮಾಡುವುದು? ಆಯಿತು, ತಮಗೆ ಅವಕಾಶವನ್ನು ಕೊಡುತ್ತೇನೆ.

ಶ್ರೀ ಬಿ.ಆರ್. ಪಾಟೀಲ್ :– ಮಾನ್ಯ ಅಧ್ಯಕ್ಷರೆ, ನಾನು ತಮಗೆ ಅಭಿನಂದಿಸುತ್ತೇನೆ. ರಾಜ್ಯದಲ್ಲಿ ಮೊದಲನೆಯ ಸಲ ಕಬ್ಬು ಬೆಳೆಗಾರರು, ವಿಷವನ್ನು ತೆಗೆದುಕೊಂಡು ಈಗಾಗಲೇ ಮೂರು ಜನರು ಸತ್ತಿದ್ದಾರೆ. ಈ ಕಡೆ ಮೈಸೂರು ಭಾಗದಲ್ಲಿ, ನಮ್ಮ ಹೈದರಾಬಾದ್ ಕರ್ನಾಟಕದಲ್ಲಿ....